(ಇಂದು ದಿನಾಂಕಃ 25-09-2024 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು)

**ಪಾಟೀ ಸವಾಲುಃ ಪ್ರತಿವಾದಿ ಪರ ಶ್ರೀ.ಎಮ. ಎಸ್.ಎಸ್ ವಕೀಲರಿಂದ ಃ**

1. ನನ್ನ ತಂದೆ ತಾಯಿ ಬದುಕಿದ್ದಾರೆ. ನನ್ನ ತಂದೆಗೆ 65 ವರ್ಷ ನನ್ನ ತಾಯಿಗೆ 50 ವರ್ಷ ಇರಬಹುದು. ನನ್ನ ತಂದೆಯ ವಯಸ್ಸು 75 ವರ್ಷ ಮತ್ತು ನನ್ನ ತಾಯಿಯ ಮಯಸ್ಸು 65 ಇರುತ್ತದೆ ಎಂದರೆ ಸರಿಯಲ್ಲ, ನನ್ನ ತಂದೆ ತಾಯಿಗೆ ನಾವು 4 ಜನ ಮಕ್ಕಳು. ನಾನು ಹಿರಿಯ ಮಗಳು ಇರುತ್ತೇನೆ, ನನ್ನ ತಂಗಿಯ ಹೆಸರು ಭಾರತಿ, ನನ್ನ ತಮ್ಮನ ಹೆಸರು ಮಲ್ಲೇಶ, ನನ್ನ ತಂಗಿಯ ಹೆಸರು ಚಿಟ್ಟೆಮ್ಮ ಇರುತ್ತದೆ. ಚಿಟ್ಟೆಮ್ಮನ ಮದುವೆ ಆಗಿಲ್ಲ, ಉಳಿದ 3 ಜನರ ಮದುವೆ ಆಗಿರುತ್ತದೆ. ಚಿಟ್ಟೆಮ್ಮ ಹುಟ್ಟು ಅಂಗವೈಕಲ್ಯ ಇದೆ ಎಂದರೆ ಸರಿ. ಚಿಟ್ಟೆಮ್ಮನ ವಯಸ್ಸು 30 ವರ್ಷಕಿಂತ ಹೆಚ್ಚಿಗೆ ಇದೆ ಎಂದರೆ ಸರಿ. ಚಿಟ್ಟೆಮ್ಮನಕಿಂತ ನಾನು 9 ವರ್ಷ ಹಿರಿಯಳು ಇರುತ್ತೇನೆ ಎಂದರೆ ಸರಿ. ಈಗ ನನ್ನ ತಂದೆ ಮತ್ತು ನನ್ನ ತಾಯಿಯ ಮೂಲ ಆದಾಯ ಜಮೀನಿನ ಕೃಷಿ ಬಿಟ್ಟು ಬೇರೆ ಆದಾಯ ಇಲ್ಲ ಎಂದರೆ ಸರಿ. ನನ್ನ ಗಂಡ ಸರಕಾರಿ ನೌಕರನಾಗಿದ್ದು ಪೋಲಿಸ ಇಲಾಖೆಯಲ್ಲಿ ಕೆಲಸ ಮಾಡುತ್ತಿದ್ದಾರೆ. ನನ್ನ ಮದುವೆ ಆದಾಗ ನನ್ನ ಗಂಡ ಕುಂಚಾವರಂನಲ್ಲಿ ಅಂದರೆ ನನ್ನ ತಂದೆ-ತಾಯಿಯ ಊರಲ್ಲಿ ಕೆಲಸ ಮಾಡುತ್ತಿದ್ದರು ಎಂದರೆ ಸರಿ. ನನ್ನ ಮದುವೆ ಆದಾಗ ನಾನು 9 ನೇ ತರಗತಿ ಓದುತ್ತಿದ್ದೆ ಎಂದರೆ ಸಾಕ್ಷಿ ನಾನು 10 ನೇ ತರಗತಿ ಓದುತ್ತಿದ್ದೇ ಎಂದು ಹೇಳುತ್ತಾರೆ. ನಾನು 10 ನೇ ತರಗತಿಯನ್ನು 2005-06 ರಲ್ಲಿ ಮುಗಿಸಿರುತ್ತೇನೆ. ನನ್ನ ಮದುವೆ 2005-06 ನೇ ಸಾಲಿನಲ್ಲಿ ಆಗಿರುತ್ತದೆ ಎಂದರೆ ಸರಿ. 2005 ರಲ್ಲಿ ನನ್ನ ವಯಸ್ಸು ಕೇವಲ 16 ವರ್ಷ ಆಗಿತ್ತು ಎಂದರೆ ಸರಿಯಲ್ಲ. ನನ್ನ ಗಂಡನ ಹೆಸರು ಶಾಂತಪ್ಪ ಇರುತ್ತದೆ. ನನ್ನ ಗಂಡ ಮದುವೆ ಆಗುವಕಿಂತ ಎಷ್ಟು ವರ್ಷಗಳ ಮೊದಲಿನಿಂದ ಪರಿಚಯ ಎಂದರೆ ಸಾಕ್ಷಿ ನನಗೆ ಆಗ ಅವರು ಪರಿಚಯ ಇರಲಿಲ್ಲ

ಎಂದು ಹೇಳುತ್ತಾರೆ. ಶಾಂತಪ್ಪರವರು ನಮ್ಮ ಮನೆಯ ಪಕ್ಕದಲ್ಲಿ ಕುಂಚಾವರಂನಲ್ಲಿ ವಾಸವಾಗಿದ್ದರು ಎಂದರೆ ಸರಿಯಲ್ಲ. ನಾನು 9 ನೇ ತರಗತಿ ಓದುತ್ತಿದ್ದಾಗ ಶಾಂತಪ್ಪರವರನ್ನು ಪ್ರೀತಿಸಿ ಅವರ ಜೊತೆ ಓಡಿ ಹೋಗಿರುತ್ತೇನೆ ಎಂದರೆ ಸರಿಯಲ್ಲ. ನಾನು ನನ್ನ ತಂದೆ ತಾಯಿಯನ್ನು ಬಿಟ್ಟು 9 ನೇ ತರಗತಿ ಓದುತ್ತಿದ್ದಾಗ ಶಾಂತಪ್ಪರವರನ್ನು ಪ್ರೀತಿಸಿ ಅವರ ಜೊತೆ ಓಡಿ ಹೋಗಿದ್ದರಿಂದ ಹಿರಿಯರು ಕುಳಿತು ನಮ್ಮ ಮದುವೆ ಮಾಡಿಸಿದ್ದರು ಎಂದರೆ ಸಾಕ್ಷಿ ನನ್ನ ಮದುವೆ ಕೊಡಂಗಲ ದೇವಸ್ಥಾನದ ಮಂಟಪದಲ್ಲಿ ಆಗಿದೆ ಉಳಿದ ಎಲ್ಲಾ ವಿಷಯ ಸುಳ್ಳು ಇರುತ್ತದೆ ಎಂದು ಹೇಳುತ್ತಾರೆ. ನನ್ನ ಗಂಡ ಶಾಂತಪ್ಪ ಮತ್ತು ನಾನು ಬೇರೆ ಕುಲದವರು ಇರುತ್ತೇವೆ. ಶಾಂತಪ್ಪರವರು ಮಾದಿಗ ಕುಲದವರು ಇರುತ್ತಾರೆ ಮತ್ತು ನಾನು ಕುರುಬ ಕುಲದವಳು ಇರುತ್ತೇನೆ. ನಮ್ಮ ಕುಟುಂಬದಲ್ಲಿ ನಮ್ಮ ಉಳಿದ ಎಲ್ಲಾ ಮಕ್ಕಳನ್ನು ನಮ್ಮ ಕುಲದವರಿಗೆ ಕೊಟ್ಟು ಮದುವೆ ಮಾಡಿರುತ್ತಾರೆ. ನಾನು ನನ್ನ ತಂದೆ ತಾಯಿಯನ್ನು ಬಿಟ್ಟು 9 ನೇ ತರಗತಿ ಓದುತ್ತಿದ್ದಾಗ ಶಾಂತಪ್ಪರವರನ್ನು ಪ್ರೀತಿಸಿ ಅವರ ಜೊತೆ ಓಡಿ ಹೋಗಿದ್ದರಿಂದ ನನ್ನ ಮದುವೆಯನ್ನು ಅವರ ಜೊತೆ ಮಾಡುವ ಪ್ರಸಂಗ ಬಂದಿರುತ್ತದೆ ಎಂದರೆ ಸರಿಯಲ್ಲ. ನನಗೆ ಮಕ್ಕಳು ಇರುತ್ತಾರೆ. ನನ್ನ ಮಗು ಮೇ ತಿಂಗಳಿನ 2006 ರಲ್ಲಿ ಜನಿಸಿರುತ್ತದೆ. ನನ್ನ ಮದುವೆ ದಿಃ21-06-2005 ರಂದು ಆಗಿರುತ್ತದೆ. ನನ್ನ ಮದುವೆ ಯಾರು ಮಾಡಿದರು ಎಂದರೆ ಸಾಕ್ಷಿ ನನ್ನ ತಂದೆ ತಾಯಿ ಉಡಿ ತುಂಬಿ ಕೊಟ್ಟಿರುತ್ತಾರೆ, ಮದುವೆ ನನ್ನ ಗಂಡನ ಮನೆಯವರು ಮಾಡಿಕೊಂಡಿರುತ್ತಾರೆ. ನನ್ನ ಗಂಡನ ಊರು ಗುರಮಿಟಕಲ ಇರುತ್ತದೆ. ಗುರಮಿಟಕಲನಿಂದ ಕೊಡಂಗಲ ಊರು ತುಂಬಾ ದೂರ ಇರುತ್ತದೆ ಎಂದರೆ ಸರಿ. ಕೊಡಂಗಲ ಗ್ರಾಮದ ವೆಂಕಟೇಶ್ವರ ಸ್ವಾಮಿ ನನ್ನ ಗಂಡನ ಮನೆ ದೇವರು ಅಲ್ಲ. ನನನ್ನು ಕರೆದುಕೊಂಡು ಹೋಗಿ ಶಾಂತಪ್ಪರವರು ಕೊಡಂಗಲನಲ್ಲಿ ಇಟ್ಟಿದ್ದರಿಂದ ನನ್ನ ತಂದೆ

ಅಲ್ಲಿಗೆ ಬಂದು ನನ್ನ ಮದುವೆ ಮಾಡಿಕೊಟ್ಟಿರುತ್ತಾರೆ ಎಂದರೆ ಸರಿಯಲ್ಲ. ನಾನು ಓಡಿ ಹೋದಾಗ ನಾನು ಅಲ್ಪ ವಯಸ್ಕಳಾಗಿದ್ದೆ ಎಂದರೆ ಸರಿಯಲ್ಲ. ನಾನು ಶಾಂತಪ್ಪರವರ ಜೊತೆ ಓಡಿ ಹೋಗಿದ್ದರಿಂದ ನನ್ನ ತಂದೆ-ತಾಯಿ ಮದುವೆ ಸಮಯದಲ್ಲಿ 30 ಸಾವಿರ ಹಣ ಮತ್ತು 15 ಗ್ರಾಮ ಬಂಗಾರ ಕೊಟ್ಟು ಮದುವೆ ಮಾಡಿಕೊಟ್ಟಿರುತ್ತಾರೆ ಎಂದರೆ ಸರಿಯಲ್ಲ. ನಾನು 2005 ರಿಂದ 2009 ರವರಗೆ ಕುಂಚಾವರಂನಲ್ಲಿ ಇದ್ದೆ, 2009 ಗುಲ್ಬರ್ಗಾದಲ್ಲಿ ಇದೆ, ನನ್ನ ಗಂಡ ಕೆಲಸ ಯಾದಗಿರಿಯಲ್ಲಿ ಮಾಡುತ್ತಿದ್ದು ಯಾದಗಿರಿ ಮತ್ತು ಗುಲ್ಬರ್ಗಾ ಜಿಲ್ಲೆ ಬೇರೆ ಬೇರೆ ಆಗಿದ್ದರಿಂದ ಯಾದಗಿರಿಯಲ್ಲಿ ನನ್ನ ಗಂಡ ಕೆಲಸ ಮಾಡುತ್ತಿದ್ದರು ಮತ್ತು ಈಗಲು ಯಾದಗಿರಿಯಲ್ಲಿಯೆ ಕೆಲಸ ಮಾಡುತ್ತಿದ್ದಾರೆ. ನಾನು 2005 ರಿಂದ 2009 ರವರಗೆ ಕುಂಚಾವರಂನಲ್ಲಿ ಇದ್ದು ನನ್ನ ಗಂಡನ ಮನೆಯಲ್ಲಿ ನಾನು ನನ್ನ ಗಂಡ ಮತ್ತು ನನ್ನ ಮಗ ಇದ್ದೆವು, ನನ್ನ ಅತ್ತೆ ಆಗಾಗ ಬಂದು ಹೋಗುತ್ತಿದ್ದರು. ಮೊದಲನೆ ಹೆರಿಗೆಯನ್ನು ನನ್ನ ತಾಯಿ ಮಾಡಿರುತ್ತಾರೆ. ನನಗೆ ಸಿಜರೀನ ಹೆರಿಗೆ ಆಗಿದೆ ಎಂದರೆ ಸರಿ. ಮೊದಲನೆ ಹೆರಿಗೆಯನ್ನು ತವರು ಮನೆಯವರು ಮಾಡಬೇಕಾಗಿದ್ದು ಎಲ್ಲಾ ಖರ್ಚನ್ನು ನನ್ನ ತಂದೆ ತಾಯಿ ಮಾಡಿರುತ್ತಾರೆ ಎಂದರೆ ಸಾಕ್ಷಿ ಅವರು ಹಣ ಕೊಟ್ಟಿಲ್ಲ ಎಂದು ಹೇಳುತ್ತಾರೆ. ಎಲ್ಲಾ ಖರ್ಚನ್ನು ನನ್ನ ತಂದೆ ತಾಯಿ ಮಾಡಿದ್ದರು ಸಹ ನನ್ನ ಗಂಡ ಮಾಡಿರುತ್ತಾನೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ಮದುವೆ ಹಾಗೂ ನನ್ನ ಹೆರಿಗೆ ಖರ್ಚನ್ನು ಮಾಡಿದ್ದರಿಂದ ನನ್ನ ತಂದೆಗೆ ಸಾಕಷ್ಟು ಸಾಲ ಆಗಿದೆ ಎಂದರೆ ಸರಿಯಲ್ಲ. ನನ್ನ ತಂಗಿಗೆ 30 ವರ್ಷ ಆಗಿದ್ದರು ಸಹ ಆರ್ಥಿಕ ತೊಂದರೆ ಇದ್ದುದ್ದರಿಂದ ನನ್ನ ತಂದೆಗೆ ಈಗಲು ಅವಳ ಮದುವೆ ಮಾಡಲು ಆಗುತ್ತಿಲ್ಲ ಎಂದರೆ ಸರಿಯಲ್ಲ. ನಾನು ಹಾಗೂ ನನ್ನ ಸಹೋದರ ಸಹೋದರಿಯರು ನನ್ನ ತಂಗಿಯ ಮದುವೆ ವಿಚಾರ ಮಾಡುತ್ತಿಲ್ಲ ಎಂದರೆ ಸರಿಯಲ್ಲ. ನನ್ನ ತಂಗಿಗೆ 30 ವರ್ಷ ಆಗಿದ್ದರು

ಸಹ ಅವಳ ಮದುವೆಯ ವಿಚಾರ ನಾವು ಮಾಡುತ್ತಿಲ್ಲ ಎಂದರೆ ಸಾಕ್ಷಿ ಅವಳು ಮದುವೆ ಆಗುವುದಿಲ್ಲ ವಿದ್ಯಾಭ್ಯಾಸ ಮಾಡುತ್ತೇನೆ ಎಂದು ಹೇಳಿರುತ್ತಾಳೆ ಎಂದು ಹೇಳುತ್ತಾರೆ. ಸಾಕ್ಷಿ ಮುಂದುವರೆದು ಅವಳಿಗೆ ವಿದ್ಯಾಭ್ಯಾಸ ಮಾಡಿಸಲು ನನ್ನ ಗಂಡ ಶಾಹಪುರಿನಲ್ಲಿ ಸೇರಿಸಿರುತ್ತಾರೆ ಎಂದು ಹೇಳುತ್ತಾರೆ. ಒಂದು ಮದುವೆ ಮಾಡಬೇಕಾದರೆ ಕನಿಷ್ಠ 20 ಲಕ್ಷ ಬೇಕು ಎಂದರೆ ಸರಿ. ನಾವು ಎಲ್ಲರೂ ಸೇರಿ ನನ್ನ ತಂಗಿಯ ಮದುವೆಗಾಗಿ ಎಷ್ಟು ಹಣ ತೆಗೆದಿಟ್ಟಿರುತ್ತೇವೆ ಎಂದರೆ ಸಾಕ್ಷಿ ಲೆಕ್ಕ ಮಾಡುವಷ್ಟು ನನಗೆ ಶಕ್ತಿ ಇಲ್ಲ ಎಂದು ಹೇಳುತ್ತಾರೆ. ನನ್ನ ತಂಗಿಯ ಮದುವೆಗಾಗಿ ಎಷ್ಟು ಹಣ ಕೊಡುತ್ತಾರೆ ಎಂದರೆ ಸಾಕ್ಷಿ ನನಗೆ ಯಾವುದೇ ಹಣ ಕೊಟ್ಟಿಲ್ಲ ನನ್ನ ತಂದೆ ತಾಯಿ ನನ್ನ ತಮ್ಮ ಬದುಕಿದ್ದಾರೆ ಅವರೆ ಮಾಡುತ್ತಾರೆ ಎಂದು ಹೇಳುತ್ತಾರೆ. ನನ್ನ ತಂಗಿಯ ಮದುವೆಗಾಗಿ ಹಣ ಜೊಡಿಸಬೇಕು ಎಂದು ಹೇಳಿದಾಗ ನಾನು ಈ ಸುಳ್ಳು ದಾವೆ ಹಾಕಿಕೊಂಡು ಬಂದಿರುತ್ತೇನೆ ಎಂದರೆ ಸರಿಯಲ್ಲ.

2. 01 ಎಕರೆ 24 ಗುಂಟೆ ಜಮೀನಿನಲ್ಲಿ ವಾರ್ಷಿಕವಾಗಿ ಎಷ್ಟು ಆದಾಯ ಬರುತ್ತಿತ್ತು ಎಂದು ನನಗೆ ಗೊತ್ತಿಲ್ಲ. ನನ್ನ ತಂದೆ 2020 ರಿಂದ ಹೃದಯ ರೋಗದಿಂದ ಬಳಲುತ್ತಿದ್ದಾರೆ. ನನ್ನ ತಂದೆಗೆ ಹೃದಯ ರೋಗ ಇದ್ದು ಮತ್ತು ಮಪ್ಪಿನ ವಯಸ್ಸಾಗಿದ್ದರಿಂದ ಅವರಿಗೆ ದುಡಿಯುವ ಶಕ್ತಿ ಇಲ್ಲ ಎಂದರೆ ಸರಿ. ನನ್ನ ತಂದೆಯ ಸೇವಾ ಚಾಕರಿ ಮಾಡಲು ನಮ್ಮ ತಾಯಿಯ ಪೂರ್ತಿ ಸಮಯ ಹೋಗುತ್ತದೆ ಎಂದರೆ ಸರಿ. ನನ್ನ ತಮ್ಮ ಮತ್ತು ಅವನ ಹೆಂಡತಿ ನನ್ನ ತಂದೆ ತಾಯಿಯನ್ನು ಬಿಟ್ಟು ಪ್ರತ್ಯೇಕವಾಗಿ ವಾಸವಾಗಿದ್ದಾರೆ ಎಂದರೆ ಸರಿಯಲ್ಲ. ನಾನು ನನ್ನ ತಂದೆಯ ವಿರುದ್ಧ ಅಸಲು ದಾವೆ ಸಂಖ್ಯೆ 29/2023 ಸಲ್ಲಿಸಿದ್ದೇನೆ ಎಂದರೆ ಸರಿ. ಅಸಲು ದಾವೆ ಸಂಖ್ಯೆ 29/2023 ಕುಚಾವರಂ ನಿವೇಶನ ಸಂಖೆ 21 ಕೆ ಸಂಬಂಧ ಪಟ್ಟದ್ದು ಇದೆ ಎಂದರೆ ಸರಿ. ನನ್ನ ಗಂಡ ಶಾಂತಪ್ಪ ಮತ್ತು ನನಗೆ

ಕುಚಾವರಂನಲ್ಲಿ ಮನೆ ಮತ್ತು ಹೊಲ ಇಲ್ಲ ಎಂದರೆ ಸಾಕ್ಷಿ ಮನೆ ಮತ್ತು ಜಮೀನು ಇಲ್ಲ ಉಳಿದದ್ದು ಇದೆ ಎಂದು ಹೇಳುತ್ತಾರೆ. ಸಾಕ್ಷಿ ಮುಂದುವರೆದು ಅಂಗಡಿ ಇದೆ ಎಂದು ಹೇಳುತ್ತಾರೆ. ಆ ಅಂಗಡಿಯನ್ನು ಯಾರಿಂದ ಖರೀದಿ ಮಾಡಿರುತ್ತೇನೆ ಎಂದರೆ ಸಾಕ್ಷಿ ರಾಜರತ್ತಂ ತಂದೆ ದುರ್ಗಯ್ಯ, ಮಾಣಪ್ಪ ತಂದೆ ದುರ್ಗಯ್ಯ ರಾಜರತ್ತಂರವರ ಮಗ ಸುಧಾಕರ, ಮಾನ್ಯಪ್ಪ ಮಕ್ಕಳು ಬಾಬು ಮತ್ತು ಪುಟರಾಜುರವರಿಂದ ಖರೀದಿ ಮಾಡಿರುತ್ತೇನೆ ಎಂದು ಹೇಳುತ್ತಾರೆ. ನಾನು ಸದರಿ ಅಂಗಡಿಯನ್ನು ಯಾವ ದಾಖಲೆಯ ಮೂಲಕ ತೆಗೆದುಕೊಂಡಿರುತ್ತೇನೆ ಎಂದರೆ ಸಾಕ್ಷಿ 2006 ರಲ್ಲಿ ಬಾಂಡ್ ಮೇಲೆ ಬರೆದುಕೊಟ್ಟಿರುತ್ತಾರೆ ಅದು ಗ್ರಾಮ ಪಂಚಾಯಿತಿಯಲ್ಲಿ ನೊಂದಣಿ ಆಗಿದೆ ಎಂದು ಹೇಳುತ್ತಾರೆ. 2006 ರಲ್ಲಿ ನನ್ನ ಹೆರಿಗೆ ಆಗಿದ್ದು ನಾನು ನನ್ನ ತಂದೆಯ ಮನೆಯಲ್ಲಿ ಇದ್ದೆ ಎಂದರೆ ಸರಿಯಲ್ಲ. ಪ್ಲಾಟನಂಬರ 21 ನ್ನು ನನ್ನ ತಂದೆ ಖರೀದಿ ಮಾಡಿದ್ದು ಅದು ಮನೆಯಲ್ಲಿ ಇದ್ದ ಬಾಂಡ್ ಪೇಪರನ್ನು ನಾನು ಹೆರಿಗೆ ಮುಗಿಸಿಕೊಂಡು ಹೋಗುವಾಗ ನಾನು ಮತ್ತು ನನ್ನ ಗಂಡ ಅದನ್ನು ಕಳ್ಳತನ ಮಾಡಿ ತೆಗೆದುಕೊಂಡು ಹೋಗಿರುತ್ತೇವೆ ಎಂದರೆ ಸರಿಯಲ್ಲ. ಆ ಬಾಂಡ ಪೇಪರ ಸಿಗದೆ ಇದ್ದಾಗ ನನ್ನ ತಂದೆ ಅದರ ಬಗ್ಗೆ ನಮ್ಮ ಹತ್ತಿರ ಹೇಳಿದಾಗ ನಾನು ಮತ್ತು ನನ್ನ ಗಂಡ ಅದನ್ನು ಇನ್ನೆಮ್ಮೆ ಬರೆಸಿಕೊಡುತ್ತೇವೆ ಎಂದು ಹೇಳಿ ಆ ಬಾಂಡ ಪೇಪರ ನಮ್ಮ ಹೆಸರಿಗೆ ಮಾಡಿಸಿಕೊಂಡಿರುತ್ತೇವೆ ಎಂದರೆ ಸರಿಯಲ್ಲ. ನನ್ನ ತಂದೆ ಅನಾರೋಗ್ಯಇದ್ದುದ್ದರಿಂದ ಅದನ್ನು ದುರುಪಯೋಗ ಪಡಿಸಿಕೊಂಡು ಆ ಪ್ಲಾಟನ್ನು ನುಂಗಿ ಹಾಕುವ ಪ್ರಯತ್ನ ಮಾಡುತ್ತಿದ್ದೇನೆ ಎಂದರೆ ಸರಿಯಲ್ಲ. ಇದೆಲ್ಲ ನನ್ನ ತಂದೆಗೆ ಗೊತ್ತಾದ ನಂತರ ಪ್ಲಾಟಿನ ಮಾಲಿಕರು ಸ್ವತಃ ಪಂಚಾಯಿತಿಗೆ ಹೋಗಿ ಆ ಪ್ಲಾಟಿನ ದಾಖಲೆಯನ್ನು ನನ್ನ ತಂದೆಯ ಹೆಸರಿಗೆ ಮಾಡಿಸಿರುತ್ತಾರೆ ಎಂದರೆ ಸರಿಯಲ್ಲ.

3. ದಾವಾ ಮನೆಯಲ್ಲಿ ಎಷ್ಟು ಕೋಣೆಗಳು ಇವೆ ಎಂದರೆ ಸಾಕ್ಷಿ 2 ರೂಮಗಳು ಇವೆ ನನ್ನ

ತಾತನ ಹೆಸರಿನಲ್ಲಿ ಇವೆ ಎಂದು ಹೇಳುತ್ತಾರೆ. ದಾವಾ ಮನೆಯಲ್ಲಿ ನನ್ನ ತಾತನ ಎಲ್ಲಾ ಮಕ್ಕಳು ಪಾಲು ವಿಭಾಗ ಮಾಡಿಕೊಂಡ ಬಗ್ಗೆ ದಾಖಲೆ ಇಲ್ಲ ಎಂದರೆ ಸಾಕ್ಷಿ ನನ್ನ ತಂದೆಗೆ ಬಂದ ಭಾಗದಲ್ಲಿ ನಾನು ಕೇಳುತ್ತಿದ್ದೇನೆ ಎಂದು ಹೇಳುತ್ತಾರೆ. ನನ್ನ ತಂದೆ ತಾಯಿಗೆ ಬೇರೆ ಮಕ್ಕಳಿಗಿಂತ ನನ್ನ ಮೇಲೆ ಪ್ರೀತಿ ವಿಶ್ವಾಸ ಇದೆ ಎಂದರೆ ಸಾಕ್ಷಿ ಎಲ್ಲಾ ಮಕ್ಕಳ ಮೇಲೆ ಇದೆ ಎಂದು ಹೇಳುತ್ತಾರೆ. ನಾನು ಮತ್ತು ನನ್ನ ಗಂಡ ಯಾದಗಿರಿಯಲ್ಲಿ 2019 ರಲ್ಲಿ ನಮ್ಮ ಸ್ವಂತ ಮನೆಯನ್ನು ಕಟ್ಟಿಸಿರುತ್ತೇವೆ. ನಾನು ಮತ್ತು ನನ್ನ ಗಂಡ ಸ್ವಂತ ಮನೆಯನ್ನು ಕಟ್ಟಿಸುವಾಗ ನನ್ನ ತಂದೆ ಬೇರೆಯವರ ಹತ್ತಿರ ಸಾಲ ಮಾಡಿ ರೂ.3,00,000/-ನನಗೆ ಕೊಟ್ಟಿದ್ದರು ಎಂದರೆ ಸರಿಯಲ್ಲ. ನನ್ನ ತಂದೆಯಿಂದ ನಾನು ರೂ.3,00,000/- ಪಡೆಯುವಾಗ ನನ್ನ ಎಲ್ಲಾ ಹಕ್ಕನ್ನು ಬಿಟ್ಟುಕೊಟ್ಟಿರುತ್ತೇನೆ ಎಂದರೆ ಸರಿಯಲ್ಲ. ನನ್ನ ಗಂಡ ಸರಕಾರಿ ನೌಕರನಾಗಿದ್ದರಿಂದ ನಾನು ಈಗ ಆರ್ಥಿಕವಾಗಿ ಚನ್ನಾಗಿ ಇದ್ದೇವೆ ಎಂದರೆ ಸಾಕ್ಷಿ ನಾನು ಮನೆ ಕಟ್ಟಿಸಿ ಸಾಲ ಮಾಡಿಕೊಂಡಿರುತ್ತೇನೆ ಎಂದು ಹೇಳುತ್ತಾರೆ. ನನ್ನ ತಂದೆ ತಾಯಿಯ ಆರ್ಥಿಕ ಪರಿಸ್ಥಿತಿ ಚನ್ನಾಗಿ ಇಲ್ಲದ ಕಾರಣ ನನ್ನ ಸಹೋದರಿಯ ಮದುವೆ ಮಾಡಲು ಆಗುತ್ತಿಲ್ಲ ಎಂದರೆ ಸರಿಯಲ್ಲ. ನನ್ನ ತಂದೆ ಅನಾರೊಗ್ಯ ಮತ್ತು ವಯಸ್ಸಾಗಿದ್ದರಿಂದ ದಾವಾ ಆಸ್ತಿಯನ್ನು ಮಾರಾಟ ಮಾಡಿ ಮತ್ತು ಪ್ಲಾಟನ್ನು ಮಾರಾಟ ಮಾಡಿ ಆ ಹಣದಿಂದ ನನ್ನ ತಂಗಿಯ ಮದುವೆ ಮಾಡಬೇಕು ಎಂದು ಹೇಳಿದ್ದರಿಂದ ನಾನು ಈ ಸುಳ್ಳು ದಾವೆ ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ. ನಾನು ಈಗಾಗಲೆ ನನ್ನ ತಂದೆಯಿಂದ ರೂ.3,00,000/-ಹಣ ಪಡೆದುಕೊಂಡು ನನ್ನ ಎಲ್ಲಾ ಹಕ್ಕನ್ನು ಬಿಟ್ಟು ಕೊಟ್ಟಿದ್ದರು ಸಹ ಈಗ ಆಸ್ತಿಯ ಮೌಲ್ಯ ಹೆಚ್ಚಾಗಿದ್ದರಿಂದ ಈ ಸುಳ್ಳು ದಾವೆ ಸಲ್ಲಿಸಿರುತ್ತೇವೆ ಎಂದರೆ ಸರಿಯಲ್ಲ.ನಾನು ಈಗಾಗಲೆ ನನ್ನ ತಂದೆಯಿಂದ ರೂ.3,00,000/-ಹಣ ಪಡೆದುಕೊಂಡು ನನ್ನ ಎಲ್ಲಾ ಹಕ್ಕನ್ನು ಬಿಟ್ಟು ಕೊಟ್ಟಿದ್ದರಿಂದ ಈ ದಾವಾ ಆಸ್ತಿಗಳಲ್ಲಿ ನನಗೆ

ಯಾವುದೇ ಹಕ್ಕು ಇಲ್ಲ ಎಂದರೆ ಸರಿಯಲ್ಲ. ನನ್ನ ತಂದೆ-ತಾಯಿಗೆ ವಯಸ್ಸಾಗಿದ್ದರಿಂದ ಈ ಎರಡು ದಾವೆಗಳನ್ನು ನನ್ನ ತಂಗಿ ನೋಡಿಕೊಳ್ಳುತ್ತಿದ್ದಾಳೆ ಎಂದರೆ ಸರಿಯಲ್ಲ. ಈ ಒಂದು ವಾರದಿಂದ ನಾನು ಮತ್ತು ನನ್ನ ಗಂಡ ನನ್ನ ತಂಗಿಯನ್ನು ಹೆದರಿಸಿದ್ದರಿಂದ ನನ್ನ ತಂಗಿ ಎಸ.ಪಿರವರ ವಿರುದ್ಧ ದೂರು ನೀಡಿರುತ್ತಾರೆ ಎಂದರೆ ಸಾಕ್ಷಿ ದೂರು ಕೊಟ್ಟಿರುತ್ತಾರೆ ಎಂದು ಹೇಳುತ್ತಾರೆ. ನಾನು ಮತ್ತು ನನ್ನ ಗಂಡ ಇಬ್ಬರು ಸೇರಿಕೊಂಡು ಪ್ರತಿವಾದಿಯರಿಗೆ ತೊಂದರೆ ಕೊಡುವ ಉದ್ದೇಶದಿಂದ ಎರಡು ದಾವೆ ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ. ಆ ಎರಡು ದಾವೆಗಳನ್ನು ನನ್ನ ತಂಗಿ ನೋಡಿಕೊಳ್ಳಬಾರದು ಎಂಬ ಉದ್ದೇಶದಿಂದ ನಾನು ಮತ್ತು ನನ್ನ ಗಂಡ ನನ್ನ ತಂಗಿಯನ್ನು ಹೆದರಿಸಿದ್ದೇವೆ ಎಂದರೆ ಸರಿಯಲ್ಲ. ನಾನು ಈಗಾಗಲೆ ರೂ.3,00,00/- ಪಡೆದುಕೊಂಡಿದ್ದರಿಂದ ಪ್ರತಿವಾದಿಯರು ದಾವಾ ಆಸ್ತಿಯ ಮಾಲಿಕರು ಇರುತ್ತಾರೆ ಎಂದರೆ ಸರಿಯಲ್ಲ. ಅಸಲು ದಾವೆ ಸಂಖ್ಯೆ 29/2023 ರಲ್ಲಿ ನನ್ನ ತಂದೆ ಪ್ರತಿವಾದ ಪತ್ರವನ್ನು ಸಲ್ಲಿಸಿ ಆ ಪ್ಲಾಟ ತಮ್ಮದು ಎಂದು ಹೇಳಿದ್ದರಿಂದ ನಾನು ಅವರ ವಿರುದ್ಧ ಈ ಸುಳ್ಳು ದಾವೆ ಸಲ್ಲಿಸಿರುತ್ತೇವೆ ಎಂದರೆ ಸರಿಯಲ್ಲ. ನಾನು 15 ವರ್ಷದವಳಾಗಿದ್ದಾಗ ಮದುವೆ ಆಗಿದ್ದು ಅಲ್ಲಿಂದ ಇಲ್ಲಿಯವರೆಗೆ ನನ್ನ ತಂದೆ ತಾಯಿಗೆ ಮಾನಸಿಕ ಕಿರುಕುಳ ಕೊಡುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಈಗಾಗಲೆ ರೂ.3,00,00/-ಪಡೆದುಕೊಂಡಿದ್ದರು ಸಹ ನನ್ನ ತಂದೆ ತಾಯಿಗೆ ಮಾನಸಿಕ ಕಿರುಕುಳ ಕೊಡುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ತಂದೆ ತಾಯಿಗೆ ವಯಸ್ಸಾಗಿದ್ದರಿಂದ ಅವರಿಗೆ ದುಡಿಯುವ ಶಕ್ತಿ ಇಲ್ಲದಿದ್ದರಿಂದ ಬೇರೆಯವರ ಹತ್ತಿರ ಸಾಕಷ್ಟು ಸಾಲ ಮಾಡಿರುತ್ತಾರೆ ಎಂದರೆ ಸರಿಯಲ್ಲ. ಸಾಲ ಮರುಪಾವತಿ ಮಾಡುವ ಶಕ್ತಿ ಅವರಿಗೆ ಇಲ್ಲ ಎಂದರೆ ಸಾಕ್ಷಿ ಅವರು ಯಾವುದೇ ಸಾಲ ಮಾಡಿಲ್ಲ ಎಂದು ಹೇಳುತ್ತಾರೆ. ಸಾಕ್ಷಿ ಮುಂದುವರೆದು ನನ್ನ ತಂದೆ ತಾಯಿಯ ಔಷಧಿಯ ಖರ್ಚನ್ನು ನಾನೇ ಮಾಡಿರುತ್ತೇನೆ ಎಂದು

ಹೇಳುತ್ತಾರೆ. ನಾನು ಸುಳ್ಳು ಪ್ರಮಾಣ ಪತ್ರ ಸಲ್ಲಿಸಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆ ಇರುವುದಿಲ್ಲಃ**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನಕ್ಕೆ ಬೆರಳಚ್ಚು ಮಾಡಿಸಲಾಯಿತು)

ಓ.ಹೇ.ಕೇ. ಸರಿ ಇದೆ

ಹಿರಿಯ ಸಿವಿಲ್ ನ್ಯಾಯಾಧೀಶರು,
ಮತ್ತು ಜೆ.ಎಮ್. ಎಫ್. ಸಿ, ಚಿಂಚೋಳಿ.